ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ನ್ಯಾಯಾಲಯ, ಮದ್ದೂರು.

ಸಿ.ಸಿ 1145/2017

| | | |
|---|---|---|
| ಸಾಕ್ಷಿದಾರರ ಹೆಸರು | - ರವಿ | ಚಾ ಸಾ -6 |
| ತಂದೆಯ ಹೆಸರು | - ನಿಂಗಯ್ಯ | ಫ್ರಾ ಸಾ -6 |
| ವಯಸ್ಸು | - 54 ವರ್ಷ | |
| ಉದ್ಯೋಗ | - ಹೆಚ್ ಸಿ | |
| ವಾಸ ಸ್ಥಳ | - ಮಂಡ್ಯ | |

**ದಿನಾಂಕಃ 24-02-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:ಅಭಿಯೋಜನೆಯ ಪರಃ ಎಪಿಪಿ ಯವರಿಂದ:**

ನಾನು ಜೂನ್ 2016 ರಿಂದ ಅಕ್ಟೋಬರ್ 2018 ರವರೆಗೆ ಹೆಚ್ ಸಿ ಯಾಗಿ ಬೆಸಗರಹಳ್ಳಿ ಪೋಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ 21-10-2016 ರಂದು ಠಾಣಾ ಅಧಿಕಾರಿಯು ಕರ್ತವ್ಯ ನಿಮಿತ್ತ ಹೊರಗಡೆ ಹೋಗಿದ್ದು, ನಾನು ಠಾಣಾ ಪ್ರಭಾರದಲ್ಲಿದ್ದಾಗ ಸಂಜೆ 7.50 ರ ಸಮಯದಲ್ಲಿ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು ದಾಖಲು ಮಾಡಿರುತ್ತೇನೆ. ಸದರಿ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಮತ್ತು ನಮ್ಮ ಮೇಲಾಧಿಕಾರಿಯವರಿಗೆ ನೀವೇದಿಸಿಕೊಂಡಿರುತ್ತೆನೆ. ಸಾಕ್ಷಿ ನಿಪಿ-1 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿಪಿ-4 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-4 ಎ ಎಂದು ಗುರುತಿಸಲಾಯಿತು.

ದಿ 22-10-2016 ರಂದು ಕೃತ್ಯ ನಡೆದ ಸ್ದಳಕ್ಕೆ ಬೇಟಿ ನೀಡಿದ್ದು, ಚಾಸಾ-1 ರವರಾಗಲಿ ಅಥವಾ ಕೃತ್ಯ ನೋಡಿದವರಾಗಲಿ ಹಾಜರಿಲ್ಲದ ಕಾರಣ ಠಾಣೆಗೆ ವಾಪಸ್ಸು ಬಂದಿರುತ್ತೇನೆ. ದಿ 27-10-2016 ರಂದು ಬೆಳಗ್ಗೆ 10.00-10.30 ರವರೆಗೆ ಚಾಸಾ-2 ರವರು ತೋರಿಸಿದ ಸ್ಥಳದಲ್ಲಿ ಪಂಚರಾದ ಚಾಸಾ-3 ಮತ್ತು ಚಾಸಾ-4 ರವರ ಸಮಕ್ಷಮ ನಿಪಿ-3 ರಂತೆ ಮಹಜರ್ ಮಾಡಿರುತ್ತೇನೆ. ಸಾಕ್ಷಿ ನಿಪಿ-3 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-3 ಸಿ ಎಂದು ಗುರುತಿಸಲಾಯಿತು. ಸದರಿ ವೇಳೆಯಲ್ಲಿ ಮೂಮಾ 1, 2 ನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ನಂತರ ಸದರಿ

ಪ್ರಕರಣದ ಮುಂದಿನ ತನಿಖೆಗಾಗಿ ಚಾಸಾ–7 ರವರಿಗೆ ಕಡತವನ್ನು ಹಸ್ತಾಂತರಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿಯ ಪರ ಮಾನ್ಯ ಶ್ರೀ.**ಎಂಎಂಎಂ **ವಕೀಲರಿಂದಃ-**

ಸ್ಥಳದಲ್ಲಿ ಒಂದು ರೀಪೀಸ್ ಪಟ್ಟಿ ಮತ್ತು ಮುರಿದ ಒಂದು ಚೇರ್ ನ್ನು ಅಮಾನತ್ತುಪಡಿಸಿದ್ದೇನೆ. ಸುಳ್ಳು ದೂರಿಗೆ ಅನುಗುಣವಾಗಿ ಸುಳ್ಳು ಪ್ರ.ವ.ವರದಿಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು 7 ದಿನಗಳ ನಂತರ ಸ್ಥಳ ಮಹಜರ್ ಮಾಡಿದ್ದೆನೆಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಪಂಚನಾಮೆ ಮಾಡಲು ಹೋದಾಗ ಪ್ರತ್ಯಕ್ಷದರ್ಶಿಗಳು ಸಿಗಲಿಲ್ಲ ಎನ್ನುತ್ತಾರೆ. ಮಹಜರ್ ಪಂಚರಿಗೆ ನೋಟೀಸ್ ನೀಡಿರಲಿಲ್ಲ. ಚಾಸಾ-2 ರವರು ಕೃತ್ಯ ನಡೆದಾಗ ನೊಂದ ವ್ಯಕ್ತಿಯನ್ನು ಆಸ್ಪತ್ರೆಗೆ ಸೇರಿಸಿದವರಾಗಿದ್ದಾರೆ. ನಾನು ಸ್ಥಳಕ್ಕೆ ಹೋಗಿ ಮಹಜರ್ ಮಾಡಿ, ಮೂಮಾ 1, 2 ನ್ನು ಅಮಾನತ್ತುಪಡಿಸಿರದೇ ಠಾಣೆಯಲ್ಲಿಯೇ ಕೇಸಿಗಾಗಿ ಸೃಷ್ಟಿ ಮಾಡಿದ್ದೆನೆಂದರೆ ಸರಿಯಲ್ಲ. ಆರೋಪಿಗೆ ತೊಂದರೆ ನೀಡಬೇಕೆಂದು ಚಾಸಾ-1 ರವರಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ